# ಬುಲೆಟ್ ಓಡಿಸುವ ಬಿಂದಾಸ್ ಬೆಡಗಿ

## ಸ್ವಾತಿ ಕೊಂಡೆ
ಉದಯದ 'ಯಾರಿವಳು' ಮಾಯಾ

◆ ನೀವು ಮರಾಠಿ ಮೂಲದವರೆ?

ಹೌದು. ಅಪ್ಪನೂರು ತುಮಕೂರು, ಅಮ್ಮನೂರು ಬೇಲೂರು. ನಾನು ತುಮಕೂರಿನಲ್ಲೇ ಬೆಳೆದಿದ್ದೇನೆ. ಚಿಕ್ಕವಳಿದ್ದಾಗಿನಿಂದ ಡಾನ್ಸ್ ಪ್ರೇಮಿ. ಹಾಗೆ ನೋಡಿದರೆ ನಾನು ನೃತ್ಯದಲ್ಲಿಯೇ ಪ್ರವರ್ಧಮಾನಕ್ಕೆ ಬರಬೇಕಿತ್ತು. ಆಕಸ್ಮಿಕವಾಗಿ ಸಿನಿಮಾ ಕ್ಷೇತ್ರಕ್ಕೆ ಬಂದೆ. ನಾಲ್ಕು ಸಿನಿಮಾ ಮಾಡಿದ ನಂತರ ಟೀವಿಗೆ ಬಂದಿದ್ದೇನೆ.

◆ ಬಣ್ಣದ ಜಗತ್ತಿಗೆ ತೆರೆದುಕೊಂಡಿದ್ದು ಹೇಗೆ?

ನಿರ್ದೇಶಕ ಜಯತೀರ್ಥ ಅವರ 'ಬ್ಯೂಟಿಫುಲ್ ಮನಸುಗಳು' ನನ್ನ ಮೊದಲ ಸಿನಿಮಾ. ಅನುಭವಿ ತಂಡದ ಸಿನಿಮಾದಲ್ಲಿಯೇ ನಾನು ನಟನೆಗೆ ಇಳಿದಿದ್ದು. ಆಕಸ್ಮಿಕವಾಗಿ ಬಂದವಳಾದರೂ ತುಂಬ ಭರವಸೆಯನ್ನು ಇಟ್ಟುಕೊಂಡಿದ್ದೆ. ಇವತ್ತೂ ಕಿರುತೆರೆಗೆ ಬರಬೇಕು ಎಂದು ಯೋಚಿಸಿ ಅವಕಾಶ ಅರಸಿಕೊಂಡು ಬಂದವಳಲ್ಲ. ಒಂದು ಮೀಟಿಂಗ್‌ಗೆ ಎಂದು ಬೆಂಗಳೂರಿಗೆ ಬಂದಿದ್ದೆ. ಆ ನಂತರ ಅದು ಧಾರಾವಾಹಿಗೆ ಎನ್ನುವುದು ಗೊತ್ತಾಯಿತು. ನನ್ನ ಮೇಲೆ ವಿಶ್ವಾಸ ಇಟ್ಟು ಪಾತ್ರ ನೀಡಿದ್ದಾರೆ ಎನ್ನುವುದು ಅರ್ಥವಾಯಿತು. ಇಂತಹ ಅವಕಾಶವನ್ನು ಬಿಡಬಾರದು ಎನ್ನುವ ದೃಷ್ಟಿಯಿಂದಲೇ ಸ್ವೀಕರಿಸಿದೆ.

◆ ಮುಂದೆ ಸಿನಿಮಾ– ಟೀವಿ ಯಾವುದು ನಿಮ್ಮ ಮಾಧ್ಯಮ ಆಗಬಹುದು?

ಎರಡನ್ನೂ ನಿಭಾಯಿಸಿಕೊಂಡು ಹೋಗಬೇಕು. ಈ ಎರಡರಲ್ಲಿ ಯಾವುದನ್ನೂ ಬಿಡಬಾರದು. ನನಗೊಂದು ವ್ಯಕ್ತಿತ್ವ ನೀಡಿದ್ದು ಸಿನಿಮಾ. ಅವಕಾಶ ಇಲ್ಲ ಎನ್ನುವ ಹೊತ್ತಿನಲ್ಲಿ ಪುನರ್ಜನ್ಮ ಕಲ್ಪಿಸಿದ್ದು ಟೀವಿ. ಹಾಗಾಗಿ ಈ ಎರಡೂ ಮಾಧ್ಯಮವನ್ನು ಸಮಾನವಾಗಿ ನೋಡುತ್ತೇನೆ. ಇವು ನನ್ನ ಪಾಲಿಗೆ ಅಪ್ಪ– ಅಮ್ಮನಂತೆ. ಹೀಗಿರುವಾಗ ಯಾರನ್ನು ತಾನೆ ಬಿಡಲು ಸಾಧ್ಯ?

◆ ಮಾಯಾಳ ಬಗ್ಗೆ ಹೇಳುವುದಾದರೆ...

ಹೊಸ ಧಾರಾವಾಹಿ. ಭಿನ್ನ ಭಿನ್ನ ಪ್ರೊಮೊಗಳು ಓಡಿವೆ. ಸೀರಿಯಲ್ ಕೆಲವೇ ಕಂತುಗಳಲ್ಲಿ ಪ್ರಸಾರ ಆಗಿದೆ. ಶೀರ್ಷಿಕೆಯೇ ಕುತೂಹಲಕರವಾಗಿದೆ. 'ಯಾರಿವಳು' ಎಂದರೆ ಯಾರೋ ಇದ್ದಾಳೆ ಎಂದೇ ಅನ್ನಿಸುತ್ತದೆ. ಮಾಯಾ ಹಲವು ಗುಣಗಳ ಮೊತ್ತ. ಆಕೆಯಲ್ಲಿ ಪ್ರೀತಿ ಇದೆ, ಜೊತೆಗೆ ಸಿಡುಕುತನವೂ. ಬಜಾರಿತನದ ಜೊತೆ ಮುಗ್ಧತೆಯೂ ಬೆಸೆದುಕೊಂಡಿದೆ. ವೈಯಕ್ತಿಕವಾಗಿ ತನ್ನ ಸ್ವಾಭಿಮಾನವನ್ನು ಬಿಟ್ಟುಕೊಡುವ ಜಾಯಮಾನ ಅವಳದಲ್ಲ. ಪಾತ್ರ ಸಂಕೀರ್ಣವಾಗಿದ್ದು ತುಂಬ ಸವಾಲಿನಿಂದ ಕೂಡಿದೆ. ಬುಲೆಟ್ ಓಡಿಸುವ ಬಿಂದಾಸ್ ಬೆಡಗಿ ಎಷ್ಟೇ ಬಜಾರಿ ಆಗಿದ್ದರೂ ಅವಳಲ್ಲಿ ಮಾತೃ ವಾತ್ಸಲ್ಯ, ಕರುಣೆ, ಪ್ರೀತಿ ಕೂಡ ಇದೆ.

◆ ಜನ ನಿಮ್ಮನ್ನು ಹೇಗೆ ಸ್ವೀಕರಿಸಿದ್ದಾರೆ ಎಂದೆನಿಸುತ್ತದೆ?

ಸಿನಿಮಾದಲ್ಲಾದರೆ ಒಂದು ಹಂತದ ಸಿದ್ಧತೆ ಆದ ಮೇಲೆ ಸುದ್ದಿಗೋಷ್ಠಿ– ಪ್ರಚಾರ ಆರಂಭವಾಗುತ್ತದೆ. ಆದರೆ ಸಿನಿಮಾ ಬಿಡುಗಡೆಯಾದ ಮೇಲಷ್ಟೇ ಫಲಿತಾಂಶ ಗೊತ್ತಾಗುತ್ತದೆ. ಧಾರಾವಾಹಿಯಲ್ಲಿ ಹೇಗೆಂದರೆ, ಆರಂಭ ಆಗುವ ಮುನ್ನವೇ ಪ್ರೊಮೊ, ಪೋಸ್ಟರ್ ಮತ್ತೆ ಮತ್ತೆ ಪ್ರಸಾರ ಮಾಡುತ್ತಾರೆ. ಸಾಮಾಜಿಕ ಮಾಧ್ಯಮಗಳಲ್ಲಿಯೂ ಅದು ಕಾಣಿಸಿಕೊಳ್ಳುತ್ತದೆ. ಕೆಲಸ ಮಾತ್ರ ಸಿನಿಮಾ ಮಾದರಿಯಲ್ಲೇ ಇರುತ್ತದೆ.

ಯಾರಿವಳು ಪೋಸ್ಟರ್ ಬಂದಾಗ ಜನ ಕೇಳಲು ಆರಂಭಿಸಿದರು. ಅಲ್ಲಿ ಜನರಿಗೆ ಒಂದು ಕುತೂಹಲ ಇತ್ತು. ಹಾರುವ ದುಪ್ಪಟದಲ್ಲಿ ಮುಖ ಮರೆ ಮಾಡಿ ಕಣ್ಣಿನಲ್ಲಿಯೇ ಭಾವ ಬಿಂಬವನ್ನು ಕಾಣಿಸಿದ್ದರು. ಎರಡನೇ ಪ್ರೊಮೊ ಬಿಟ್ಟಾಗ ನನ್ನ ಸುತ್ತಮುತ್ತಲ ಜನ 'ಸ್ವಾತಿ ನೀನಾ ಇದು? ನೀನು ಮಾಡ್ತಾ ಇದ್ದಿ ಎಂದು ಗೊತ್ತಾಗಲೇ ಇಲ್ಲ. ಪ್ರೊಮೊ ಸಖತ್ತಾಗಿ ಬಂದಿದೆ' ಎಂದು ನನ್ನ ಸುತ್ತಲಿನ ಜನ ಪ್ರಶಂಸೆಯನ್ನು ವ್ಯಕ್ತಪಡಿಸಿದ್ದಾರೆ. ಪ್ರತಿಕ್ರಿಯೆ ನೋಡಿದಾಗ ನಮ್ಮ ಕೆಲಸ ಜನರನ್ನು ತಲುಪಿದೆ ಎಂದು ಅನ್ನಿಸಿದೆ. ಸಿನಿಮಾ ಕೆಲವು ದಿನಗಳ ಮಾತ್ರ ಚಲಾವಣೆಯಲ್ಲಿ ಇರುತ್ತದೆ. ಧಾರಾವಾಹಿ ವರ್ಷಗಟ್ಟಲೆ ಉಳಿಯುತ್ತದೆ.

◆ ಅಭಿನಯ ಹೊರತಾಗಿ ಬೇರೆ ಏನು ಮಾಡುವ ಆಸೆಯಿದೆ?

ಡಾನ್ಸ್ ಶೋ ಮೂಲಕವೇ ಸಿನಿಮಾ ಬರಬೇಕಿತ್ತು ಎನ್ನುವ ಬಯಕೆ ನನಗಿತ್ತು. ನನ್ನ ಬಯಕೆಯಂತೆ ಅದಾಗಲಿಲ್ಲ. ಆದರೇನಂತೆ ನನಗೆ ಆಸೆಯಂತೂ ಹಾಗೆಯೇ ಉಳಿದಿದೆ. ದೊಡ್ಡ ದೊಡ್ಡ ನಿರ್ದೇಶಕರು ಕಲಾಭಿಮಾನಿಗಳ ಸಮ್ಮುಖದ ದೊಡ್ಡ ವೇದಿಕೆಯೊಂದರಲ್ಲಿ ನೃತ್ಯ ಪ್ರದರ್ಶನ ಮಾಡಬೇಕು. ಅದಕ್ಕೊಂದು ಅವಕಾಶ ಸಿಗುತ್ತದೆ ಎನ್ನುವ ಆಸೆಯೂ ಇದೆ. ಅದು ನೆರವೇರಲಿ, ನೇರವೇರದೆ ಇರಲಿ ಕೊನೆಯತನಕ ಆ ಆಸೆ ಮಾತ್ರ ಇದ್ದೇ ಇರುತ್ತದೆ.

■ **ರಾಘವೇಂದ್ರ ಕೆ.**

